# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 10 ಫ್ರಾ.ಸಾ. : 09**

ಸಾಕ್ಷಿಯ ಹೆಸರು : ನಾಗರಾಜ ಬಾಲರಾಜ

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದ**

5. ಮೃತ ವೆಲು ಹಾಗೂ ನಾನು ಹುಟ್ಟಿನಿಂದಲೂ ಪರಿಚಿತರು ಹಾಗೂ ಇಬ್ಬರೂ ಒಂದೇ ಊರಿನವರು. ವೇಲುವಿನ ಹೆಂಡತಿ ಜಾನಕಿ ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ನಮ್ಮ ಮನೆಯಿಂದ ಮೃತ ವೇಲುವಿನ ಮನೆ 100 ಮೀಟರ ಅಂತರದಲ್ಲಿದೆ. ವೇಲುವಿನ ಮನೆಯ ಅಕ್ಕ-ಪಕ್ಕದಲ್ಲಿ ಚಾಸಾ-27 ಮತ್ತು ಪ್ರೇಮಾ ಎನ್ನುವವರ ಮನೆಗಳು ಇರುತ್ತವೆ. ಈ ಎರಡು ಮನೆಗಳನ್ನು ಬಿಟ್ಟರೆ ಸಮೀಪದಲ್ಲಿ ಬೇರೆ ಯಾರ ಮನೆ ಇರುವುದಿಲ್ಲ. ವೇಲು ಹಾಗೂ ಆತನ ಮಕ್ಕಳು ಕೊಲೆಯಾದ ವಿಚಾರ ಆ ದಿನ ರಾತ್ರಿಯೇ ನನಗೆ ಗೊತ್ತಾಯಿತು. ಈ ವಿಷಯ ನನಗೆ ಊರಿನ ಜನರಿಂದ ತಿಳಿಯಿತು. ಆಗ ನಾನು ಮೃತ ವೇಲುವಿನ ಮನೆಯ ಬಳಿ ಹೋಗಿ ನೋಡಿರುತ್ತೇನೆ. ಅಲ್ಲಿಗೆ ಹೋದಾಗ ಜಾನಕಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆ ದಿನ ರಾತ್ರಿ ಮೃತ ವೇಲು, ಆತನ ಮಕ್ಕಳಾದ ಅಶ್ವಿನಿ ಮತ್ತು ಸತ್ಯ ನಾರಾಯಣ ಮೂರ್ತಿಯವರ ಮೃತ ದೇಹಗಳನ್ನು ನೋಡಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಸಹ ನನಗೆ ಇರುತ್ತದೆ. ಆರೋಪಿಯ ಮನೆ ಎಲ್ಲಿದೆ ಎಂದೂ ಸಹ ನನಗೆ ಮೊದಲಿನಿಂದಲೂ ಗೊತ್ತು. ಪೊಲೀಸರು ಆರೋಪಿಯನ್ನು ದಸ್ತಗಿರಿ ಮಾಡಿದ ವಿಷಯ ಊರಿನ ಜನರಿಗೆ ತಿಳಿದಿರುತ್ತದೆ ಎಂದರೆ ಸರಿ. ಆರೋಪಿಯನ್ನು ಪೊಲೀಸರು ದಸ್ತಗಿರಿ ಮಾಡಿದಾಗ, ಆತನ ಮನೆಯ ಹತ್ತಿರ ಸುಮಾರು 20 ರಿಂದ 30 ಜನರು ಸೇರಿದ್ದರು, ಅದಲ್ಲದೇ 10 ಮಂದಿ ಪೊಲೀಸರು ಸೇರಿದ್ದರು. ಅಲ್ಲಿ ಪೊಲೀಸರು ಆರೋಪಿಯ ಮನೆಯನು ಪರಿಶೀಲಿಸುತ್ತಿದ್ದರು ಎಂದರೆ ಸರಿ.

6. ನನಗೆ ಚಾಸಾ-29 ಭಾಗ್ಯಲಕ್ಷ್ಮಿ ಯವರ ಪರಿಚಯ ಇರುತ್ತದೆ, ಅವರ ಮನೆ ನಮ್ಮ ಮನೆಯ ಪಕ್ಕದಲ್ಲಿರುತ್ತದೆ. ಮೃತ ವೇಲು ಕುಟುಂಬಕ್ಕೂ ಮತ್ತು ಚಾಸಾ-29 ರವರಿಗೆ ಯಾವ ರೀತಿಯ ಸಂಬಂಧ ಎಂದು ನನಗೆ ಗೊತ್ತಿಲ್ಲ. ಪಂಚನಾಮೆಗೆ ನನ್ನನ್ನು ಕರೆದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ, ಆದರೆ ಪಂಚನಾಮೆಗೆ ಬರುವಂತೆ ನೋಟಿಸ್ ನೀಡಿರುತ್ತಾರೆ. ಪೊಲೀಸರು

ನೋಟಿಸ್ ನ್ನು ನನ್ನ ಮನೆಗೆ ಬಂದು ನೀಡಿರುತ್ತಾರೆ. ಸದರಿ ನೋಟಿಸ್‌ಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಕಧ್ರಾ ಪೊಲೀಸ್ ಠಾಣೆಗೆ ನಾನು ಒಮ್ಮೆ ಮಾತ್ರ ಹೋಗಿರುತ್ತೇನೆ. ಪಂಚನಾಮೆಯ ಸಮಯದಲ್ಲಿ ಜಪ್ತುಪಡಿಸಿಕೊಂಡ ಮೊಬೈಲ್ ಪೋನ್ ಗಳ ಐ.ಎಂ.ಈ.ಐ ನಂಬರಗಳು ಗೊತ್ತಿದೆಯಾ ಎಂದರೆ ಸಾಕ್ಷಿಯು ಪೊಲೀಸರು ಓದಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಮೊಬೈಲ್ ಪೋನ್ ಗಳು, ಆಭರಣಗಳು ಹಾಗೂ ನಗದು ಹಣದ ಬಗ್ಗೆ ಪಂಚನಾಮೆಯ ಯಾವ ಕಂಡಿಕೆಗಳಲ್ಲಿ ಬರೆದಿದ್ದಾರೆ ಎಂದು ಗೊತ್ತಿದೆಯಾ ಎಂದರೆ ಸಾಕ್ಷಿಯು ಪಂಚನಾಮೆಯಲ್ಲಿ ಬರೆದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ಬರೆದ ಪೊಲೀಸರ ಹೆಸರು ನನಗೆ ಹೇಳಲು ಬರುವುದಿಲ್ಲ. ಸದರಿ ಪಂಚನಾಮೆಯಲ್ಲಿ ನನ್ನ ಮತ್ತು ಚಾಸಾ-11 ರವರ ಸಹಿಯನ್ನು ಬಿಟ್ಟರೆ ಬೇರೆ ಯಾರ ಸಹಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಮತ್ತು ಚಾಸಾ-11 ರವರು ಸದರಿ ಪಂಚನಾಮೆಗೆ ಒಂದೇ ಸಮಯದಲ್ಲಿ ಸಹಿ ಮಾಡಿರುತ್ತೇವೆ.

7. ಆರೋಪಿಯನ್ನು ದಸ್ತಗಿರಿ ಮಾಡಿದ ನಂತರ ನಾನು ಆತನನ್ನು ನೋಡಿದಾಗ, ಅವನ ಮುಖಕ್ಕೆ ಮುಸುಕು ಹಾಕಲಾಗಿತ್ತು ಹಾಗೂ ಕೈಗಳಿಗೆ ಕೋಳ ಹಾಕಲಾಗಿತ್ತು. ನಾನು ಆರೋಪಿಯನ್ನು ಠಾಣೆಯಲ್ಲಿ ನೋಡಿದಾಗ ಖೈದಿಗಳ ಕೋಣೆಯಲ್ಲಿ ಇರಿಸಿದ್ದರು ಹಾಗೂ ಆತನ ಮುಖಕ್ಕೆ ಮುಸುಕು ಹಾಗೂ ಕೈಗಳಿಗೆ ಕೋಳ ಹಾಕಲಾಗಿತ್ತು. ನಾನು ಠಾಣೆಗೆ ಹೋದಾಗ ಆರೋಪಿಯ ಅಕ್ಕ-ಪಕ್ಕದಲ್ಲಿ 2 ಜನ ಪೊಲೀಸರು ಇದ್ದರು. ಆರೋಪಿಯನ್ನು ಯಾವಾಗಿನಿಂದ ಅಲ್ಲಿ ಇಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ನಾವು ಪೊಲೀಸ್ ಠಾಣೆಯಿಂದ ಪಂಚನಾಮೆಗೆ ಹೋದ ಜೀಪ್ ನ ನಂಬರ್ ನನಗೆ ನೆನಪಿಲ್ಲ. ನಾನು ಹೋಗುವಾಗ ಒಂದೇ ಜೀಪ್ ನಲ್ಲಿ ಹೋಗಿರುತ್ತೇವೆ. ನನ್ನ ಮುಖ್ಯ ವಿಚಾರಣೆಯಲ್ಲಿ ತೋರಿಸಿದ ಎಲ್ಲಾ ದಾಖಲೆಗಳ ಮೇಲೆ ಪೊಲೀಸರು ನನ್ನಿಂದ ಸಹಿಯನ್ನು ಪಂಚನಾಮೆಗೆ ಹೋಗುವ 10 ನಿಮಿಷದ ಮೊದಲು ಪಡೆದುಕೊಂಡಿರುತ್ತಾರೆ.

8. ಪಂಚನಾಮೆಯನ್ನು ಮಾಡಲು ಆರೋಪಿಯನ್ನು ಪೊಲೀಸ್ ಠಾಣೆಯಿಂದ ಕರೆದುಕೊಂಡು ಹೊರಟು ಪುನಃ ವಾಪಸು ಠಾಣೆಗೆ ಕರೆದುಕೊಂಡು ಬರುವವರೆಗೆ ಆತನ ಮುಖಕ್ಕೆ ಮುಸುಕು ಹಾಕಲಾಗಿತ್ತು ಮತ್ತು ಕೈಗಳಿಗೆ ಕೋಳ ಹಾಕಲಾಗಿತ್ತು. ನಾವು ಜೀಪ್ ನಲ್ಲಿ ಪ್ರಯಾಣಿಸಿದ ದೂರ ಒಂದೂವರೆ ಕಿ.ಮೀ ಆಗಿರುತ್ತದೆ. ಮೊದಲ ಬಾರಿಗೆ ಜೀಪ್ ನ್ನು ನಿಲ್ಲಿಸಿದ ಸ್ಥಳದ ದೂರ 300 ಮೀಟರ್ ಆಗಿರುತ್ತದೆ. ಆರೋಪಿಯ ಮನೆ ನಂಬರ್ ಹಾಗೂ ಜಾಗದ

ಸರ್ವೆ ನಂಬರ್ ನನಗೆ ನೆನಪಿಲ್ಲ. ಆರೋಪಿಯ ಮನೆಯಲ್ಲಿ ಇಬ್ಬರು ಮಾತ್ರ ಇದ್ದರು. ಆರೋಪಿಯ ಮನೆಯ ಸುತ್ತ ಕಂಪೌಂಡ್ ಇರುವುದಿಲ್ಲ.

9. ನಿಪಿ–27 ರಿಂದ ನಿಪಿ–30 ಪೋಟೋಗಳಲ್ಲಿ ದಿನನಿತ್ಯದ ಸಾಮಾನುಗಳು ಕಾಣುತ್ತವೆ ಹಾಗೂ ಅವುಗಳನ್ನು ಜನರು ಬಳಸುತ್ತಿದ್ದರು ಎಂದರೆ ಸರಿ. ನಿಪಿ–32 ಮತ್ತು ನಿಪಿ–33 ಪೋಟೋಗಳಲ್ಲಿ ಬಾತ್ ರೂಮ್ ಕಾಣಿಸುತ್ತದೆ ಎಂದರೆ ಸರಿಯಲ್ಲ. ನಿಪಿ–32 ಮತ್ತು ನಿಪಿ–33 ಪೋಟೋಗಳಲ್ಲಿ ಕಾಣುವ ರೂಮ್ ನ್ನು ಆ ಮನೆಯ ಜನರು ಉಪಯೋಗಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ–25 ರಿಂದ ನಿಪಿ–35 ಪೋಟೋಗಳಲ್ಲಿ ಕಾಣಿಸುವ ಸ್ಥಳವು ಒಂದೇ ಆಗಿರುತ್ತದೆ ಎಂದರೆ ಸರಿ. ಆ ಸ್ಥಳದ ಚೆಕ್ ಬಂದಿ ನನಗೆ ಗೊತ್ತಿಲ್ಲ. ಡಿಜಿಟಲ್ ಕ್ಯಾಮೆರಾಗಳನ್ನು ಬಳಸಿ ಅದರಲ್ಲಿ ದಿನಾಂಕ ಮತ್ತು ಸಮಯ ಮೂಡಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ–25 ರಿಂದ ನಿಪಿ–35 ಪೋಟೋಗಳಲ್ಲಿ ಯಾವ ಪೋಟೋವನ್ನು ಮೊದಲು ತೆಗೆದಿದ್ದಾರೆ ಹಾಗೂ ನಂತರ ಯಾವ ಪೋಟೋಗಳನ್ನು ತೆಗೆದಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಮುದ್ದೆ ಮಾಲು–27 ಟೀ–ಶರ್ಟ್ ಮೇಲೆ ಏನು ಬರೆಯಲಾಗಿದೆ ಎಂದರೆ ಸಾಕ್ಷಿಯು ಹೂವಿನ ಚಿತ್ರ ಹಾಗೂ ಇಂಗ್ಲೀಷ್ ಅಕ್ಷರಗಳು ಇರುತ್ತವೆ ಎಂದು ನುಡಿಯುತ್ತಾರೆ. ಮುದ್ದೆ ಮಾಲು–28 ಚಡ್ಡಿಯ ಮೇಲೆ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಮುದ್ದೆ ಮಾಲುಗಳನ್ನು ಜಪ್ತುಪಡಿಸಿ, ಸೀಲ್ ಮಾಡಿದಾಗ ಸದರಿ ಸೀಲ್ ಮೇಲೆ ಇದ್ದ ಅಕ್ಷರ ಕನ್ನಡದಲ್ಲಿರುತ್ತದೆ.

10. ಮುದ್ದೆ ಮಾಲು–26 ಕತ್ತಿಯನ್ನು ಪೇಪರ್ ನಿಂದ ಸುತ್ತಿರುವುದು ಕಾಣಿಸುತ್ತಿಲ್ಲ ಎಂದರೆ ಸರಿ. ಸದರಿ ಕತ್ತಿಯ ಮುಂದೆ ಯಾವುದೇ ಬೆಂಡ್ ಇಲ್ಲ ಹಾಗೂ ರಕ್ತದ ಕಲೆ ಕಾಣುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕತ್ತಿಯಂತಹ ವಸ್ತುವನ್ನು ಸಾಮಾನ್ಯವಾಗಿ ಎಲ್ಲಾ ಮನೆಗಳಲ್ಲಿ ಉಪಯೋಗಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕತ್ತಿಯಂತಹ ವಸ್ತು ಸಾಮಾನ್ಯವಾಗಿ ಮಾರ್ಕೇಟ್ ನಲ್ಲಿ ದೊರೆಯುತ್ತದೆ ಎಂದರೆ ಸರಿ. ಸದರಿ ಕತ್ತಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು–26 ಕತ್ತಿಯನ್ನು ಹಾಗೂ ಮುದ್ದೆ ಮಾಲು–27 ಮತ್ತು 28 ಬಟ್ಟೆಗಳನ್ನು ಪಂಚನಾಮೆಯ ಕಾಲಕ್ಕೆ ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಮುದ್ದೆ ಮಾಲು–29 ಮೊಬೈಲ್ ಪೋನ್‌ಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯೇ ಮಾಲು–29 ನ್ನು ತೋರಿಸಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಮೊಬೈಲ್ ಪೋನ್

ಮೇಲೆ ನನ್ನ ಸಹಿ ಕಾಣುತ್ತಿಲ್ಲ. ನಾವು ಪಂಚನಾಮೆಗೆ ಹೋದಾಗ ಜೀಪ್ ನ್ನು ಎಷ್ಟು ಸಲ ನಿಲ್ಲಿಸಲಾಗಿತ್ತು ಎಂದು ನನಗೆ ಗೊತ್ತಿಲ್ಲ.

11. ಮೃತ ವೇಲು ಶವ ಸಿಕ್ಕ ಸ್ಥಳದಲ್ಲಿ ಸಾಗುವಾನಿ ಮರ ನೆಲದ ಮೇಲೆ ಬಿದ್ದಿರುತ್ತದೆ. ಪೊಲೀಸರು ಮಾಡಿದ ಪಂಚನಾಮೆಗಳ ಸಮಯದಲ್ಲಿ ನಾನು ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಸ್ಥಳಗಳನ್ನು ತೋರಿಸಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಹಾಜರುಪಡಿಸಿಲ್ಲ ಹಾಗೂ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಹಾಗೂ ಮುದ್ದೆ ಮಾಲುಗಳನ್ನು ಪೊಲೀಸರೇ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ